www.prepp.in

Prepp
Your Personal Exams Guide

| | | | |
|---|---|---|---|
| **A1** | ಅರ್ಹತಾ ಪರೀಕ್ಷೆ – 2025<br>ಪತ್ರಿಕೆ – 2<br>ಒಟ್ಟು ಪ್ರಶ್ನೆಗಳು : 100<br>ಗರಿಷ್ಠ ಅಂಕಗಳು : 200<br>ವಿಷಯ : ಕನ್ನಡ<br>ವಿಷಯದ ಕೋಡ್ : 02 | ಕ್ರಮ ಸಂಖ್ಯೆ : | |
| ವರ್ಷನ್ ಕೋಡ್ | ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿ | ಪತ್ರಿಕೆ ಸಂಕೇತ | **KAN21125A** |

## ಅಭ್ಯರ್ಥಿಗಳಿಗೆ ಸೂಚನೆಗಳು

ಮಾಡಿ:

1. ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಯನ್ನು ನಿಮಗೆ ಬೆ. **9.55** ಕ್ಕೆ ಕೊಡುತ್ತಾರೆ.
2. ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳತಕ್ಕದ್ದು.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

ಮಾಡಬೇಡಿ:

- ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ **ಟೈಮಿಂಗ್ & ಮಾರ್ಕನ್ನು** ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.

## ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ **signs and symbols** ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು **100** ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. ಬೆಳಿಗ್ಗೆ **10.00** ಗಂಟೆಗೆ ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟುಹೋಗಿದ್ದಲ್ಲಿ ಪರೀಕ್ಷೆ ಪ್ರಾರಂಭವಾದ 5 ನಿಮಿಷಗಳೊಳಗೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು. ನಂತರ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.

| ಸರಿಯಾದ ಕ್ರಮ | | | | ತಪ್ಪು ಕ್ರಮಗಳು WRONG METHODS | | | | | | | | | | | |
|---|---|---|---|---|---|---|---|---|---|---|---|---|---|---|---|
| CORRECT METHOD | | | | ⊗ | ② | ③ | ④ | ① | ② | ③ | ④ | ① | ● | ● | ④ |
| ① | ● | ③ | ④ | ◐ | ② | ③ | ④ | ① | ● | ③ | ④ | ① | ② | ③ | ④ |

5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ಕಚ್ಚಾ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. **ಮ. 1.00 ಗಂಟೆಗೆ ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.**
8. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತದೆ.
10. **ಋಣಾತ್ಮಕ ಮೌಲ್ಯಮಾಪನವಿರುವುದಿಲ್ಲ.**
11. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.

DO NOT WRITE HERE

Prepp
Your Personal Exams Guide

1. 'ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಚ್ಛೋದ್ಭವಂ
ಪಡೆದಂ ಪೆರ್ಗಡಲಂ' ಎಂಬ ಕವಿಯ ಪದ್ಯದ ಸಾಲು ಯಾವ ಸರೋವರವನ್ನು ಕುರಿತದ್ದಾಗಿದೆ?
(1) ವೈಶಂಪಾಯನ ಸರೋವರ
(2) ಪಂಪಾ ಸರೋವರ
(3) ಅಚ್ಛೋದ ಸರೋವರ
(4) ಜ್ಞಾನ ಸರೋವರ

2. 'ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟಕತೆ'ಯು ಪಂಚತಂತ್ರದ ಯಾವ ಪ್ರಕರಣದಲ್ಲಿ ಬರುತ್ತದೆ?
(1) ಭೇದ ಪ್ರಕರಣ ವರ್ಣನಂ
(2) ವಂಚನಾ ಪ್ರಕರಣ ವರ್ಣನಂ
(3) ಮಿತ್ರಕಾರ್ಯ ಪ್ರಕರಣಂ
(4) ವಿಶ್ವಾಸ ಪ್ರಕರಣ ವರ್ಣನಂ

3. 'ರಣಮುಖದುಳ್', 'ಕಾಮನಸಿತೋತ್ಪಲವರ್ಣನ್' – ಈ ಪದಗಳು ಬಳಕೆಯಾಗಿರುವ ಶಾಸನ
(1) ಮಂಗಲೀಶನ ಬಾದಾಮಿ ಗುಹಾಶಾಸನ
(2) ಶ್ರವಣಬೆಳಗೊಳದ ನಂದಿಸೇನ ಮುನಿಯ ಶಾಸನ
(3) ಹಲ್ಮಿಡಿ ಶಾಸನ
(4) ತಮಟಕಲ್ಲು ಶಾಸನ

4. ಪ್ರಾಚೀನ ಕನ್ನಡ ಸಾಹಿತ್ಯರೂಪವಾದ 'ಒನಕೆವಾಡು' ವನ್ನು ಉಲ್ಲೇಖಿಸಿರುವ ಚಂಪೂಕಾವ್ಯ
(1) ನೇಮಿಚಂದ್ರನ ಲೀಲಾವತಿ
(2) ಬ್ರಹ್ಮಶಿವನ ಸಮಯ ಪರೀಕ್ಷೆ
(3) ಶಾಂತಿನಾಥನ ಸುಕುಮಾರ ಚರಿತೆ
(4) ಪೊನ್ನನ ಭುವನೈಕ ರಾಮಾಭ್ಯುದಯ

5. ಇವು ನಯಸೇನ ಕವಿಯ ಬಿರುದುಗಳು:
(a) ಸುಕವಿನಿಕರ ಪಿಕಮಾಕಂದ
(b) ಸಮ್ಯಕ್ತ ರತ್ನಾಕರ
(c) ವಾತ್ಸಲ್ಯ ರತ್ನಾಕರ
(d) ಭವ್ಯಜನವನ ಮಾರ್ತಾಂಡ
(1) a ಮತ್ತು d ಮಾತ್ರ
(2) a ಮತ್ತು c ಮಾತ್ರ
(3) c ಮತ್ತು d ಮಾತ್ರ
(4) b ಮತ್ತು d ಮಾತ್ರ

6. ಈ ಕೆಳಕಂಡ ಉಕ್ತಿಗಳಲ್ಲಿ ಯಾವ ಉಕ್ತಿಗಳು 'ಕವಿರಾಜ ಮಾರ್ಗ'ದಲ್ಲಿ ಬರುತ್ತವೆ?
(a) ನೆಗಟ್ದಿರ್ದ ಕನ್ನಡಂಗಳೊಳ್ ಅಗಣಿತ ಗುಣವಿದಿತ
ಸಂಸ್ಕೃತೋಕ್ತ ಕ್ರಮಮಂ ಬಗೆದೊಂದು ಮಾಡಿ
(b) ಧೀರರಿನಾವುದು ತಾನಾಧಾರಮದಧಿಕರಣಮಲ್ಲಿ ಸಪ್ತಮಿ ತಿಳಿ
(c) ರೀತಿ ವಿನೂತ ವಸ್ತುಕೃತಿಗೊಪ್ಪುವ ಮೆಯ್; ರಸಭಾವ ವೃತ್ತಿ ನಿರ್ಣೀತಿಯೆ ಜೀವಂ
(d) ನಾಣ್ಣುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ
(1) b ಮತ್ತು c ಮಾತ್ರ
(2) c ಮತ್ತು d ಮಾತ್ರ
(3) a ಮತ್ತು d ಮಾತ್ರ
(4) b ಮತ್ತು d ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

7. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(1) ಭಟ್ಟ ನಾರಾಯಣ - ರನ್ನ
(2) ದಂಡಿ - ಶ್ರೀವಿಜಯ
(3) ವಿಮಲಸೂರಿ - ನಾಗಚಂದ್ರ
(4) ವಿಷ್ಣು ಶರ್ಮ - ದುರ್ಗಸಿಂಹ

8. ಇವುಗಳನ್ನು ಹೊಂದಿಸಿ ಬರೆಯಿರಿ :

(a) ಪೊಸಜಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್ ಪಸರಿಸಿ — (i) ರನ್ನ
(b) ಎಲೆ ತಾರಾಗಂ ಹರಂ ಕಣ್ಣಿಡೆ ಕರಗಿದುದು ಅಂತಲ್ತು ರುದ್ರಾಟ್ಟಹಾಸಂ ಜಲಮಾದತ್ತು — (ii) ಹರಿಹರ
(c) ಮುಗಿಲಂ ಮುಟ್ಟಿದ ಕಾಳಕಾಯಬಲದಿಂದರ್ಕಂಗೆ ಕೋಡಿಟ್ಟ ಕೋಡುಗಳಿಂ — (iii) ನೇಮಿಚಂದ್ರ
(d) ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವೊಲಂತಾ ಸರೋಮಧ್ಯದಿಂ ಸಾಹಸ ಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟು — (iv) ಬ್ರಹ್ಮಶಿವ
(v) ಒಂದನೆಯ ನಾಗವರ್ಮ

ಕೋಡ್‌ಗಳು :

(1) a – iii, b – ii, c – i, d – iv
(2) a – v, b – i, c – iii, d – ii
(3) a – ii, b – v, c – iii, d – i
(4) a – i, b – iii, c – v, d – iv

9. ಹೊಂದಿಸಿ ಬರೆಯಿರಿ :

| ಪಟ್ಟಿ-I | ಪಟ್ಟಿ-II |
|---|---|
| (a) ಇಂತಪ್ಪವರುಂ ಅಳುವಂದಮದ್ಭುತಂ | (i) ಷಡಕ್ಷರದೇವ |
| (b) ಮಾದೇವಿಯರಸಂ ಅರೆವೆಣ್ಣಾದಂ | (ii) ನಾಗವರ್ಮ |
| (c) ಇನ್ನವೇಂ ಸೈಪೊಳವೆ | (iii) ಆಂಡಯ್ಯ |
| (d) ಒಳಸೋರ್ದುದು ಶಾಂತಿರಸಂ | (iv) ಪಂಪ |

ಕೋಡ್‌ಗಳು :

(1) a – iii, b – ii, c – i, d – iv
(2) a – iii, b – ii, c – iv, d – i
(3) a – ii, b – iii, c – iv, d – i
(4) a – ii, b – iv, c – iii, d – i

10. ಕನ್ನಡ ಶಾಸನಗಳಲ್ಲಿ ಕಂಡುಬರುವ ಈ ಕೆಳಕಂಡ ಪದಗಳನ್ನು ಕಾಲಾನುಕ್ರಮಣಿಕೆ ಮಾದರಿಯಲ್ಲಿ ಗುರುತಿಸಿ.

(1) ಸುರಚಾಪಂಬೋಲೆ, ಕಲಿಯುಗ ವಿಪರೀತನ್, ಪ್ರೇಮಾಲಯಸುತನ್, ದಿವ್ಯ ಪುರುಷನ್
(2) ದಿವ್ಯ ಪುರುಷನ್, ಸುರಚಾಪಂಬೋಲೆ, ಕಲಿಯುಗ ವಿಪರೀತನ್, ಪ್ರೇಮಾಲಯಸುತನ್
(3) ಪ್ರೇಮಾಲಯಸುತನ್, ದಿವ್ಯ ಪುರುಷನ್, ಕಲಿಯುಗ ವಿಪರೀತನ್, ಸುರಚಾಪಂಬೋಲೆ
(4) ಕಲಿಯುಗ ವಿಪರೀತನ್, ದಿವ್ಯ ಪುರುಷನ್, ಪ್ರೇಮಾಲಯಸುತನ್, ಸುರಚಾಪಂಬೋಲೆ

---

ಕಚ್ಚಾ ಕೆಲಸಕ್ಕೆ ಸ್ಥಳ

11. 'ಊರದ ಚೇಳಿನ ಏರದ ಬೇನೆಯಲ್ಲಿ
ಮೂರು ಲೋಕವೆಲ್ಲ ನರಳಿತ್ತು' ಎಂಬುದು ಯಾರ ವಚನದ ಸಾಲು?

(1) ಅಕ್ಕಮಹಾದೇವಿ
(2) ಅಲ್ಲಮಪ್ರಭು
(3) ಚೆನ್ನಬಸವಣ್ಣ
(4) ಮುಕ್ತಾಯಕ್ಕ

12. 'ಇಲ್ಲಿ ವಚನ ಕ್ರಮ ಸೇರುವ ತಪ್ಪುಳ್ಳಡೆ ನಿಮ್ಮ ಪರಮಜ್ಞಾನದಿ ತಿದ್ದಿಂ, ಈ ವಚನಾನುಭಾವ ಪ್ರಸಂಗಮಂ ಮಾಡಿ ಸುಖಿಸುವುದು' ಎಂಬ ಹೇಳಿಕೆಯು ಯಾವ ಶೂನ್ಯ ಸಂಪಾದನಾಕಾರನದ್ದಾಗಿದೆ?

(1) ಶಿವಗಣ ಪ್ರಸಾದಿ ಮಹಾದೇವಯ್ಯ
(2) ಹಲಗೆಯಾರ್ಯ
(3) ಗುಮ್ಮಳಾಪುರದ ಸಿದ್ಧಲಿಂಗಯತಿ
(4) ಗೂಳೂರು ಸಿದ್ಧವೀರಣ್ಣೊಡೆಯ

13. 'ಚೋರ ನಿಂದಿಸಿ ಶಶಿಯ ಬೈದಡೆ, ಕ್ಷೀರವನು ಕ್ಷಯರೋಗಿ ಹಳಿದಡೆ, ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು'– ಈ ಸಾಲು ಕೆಳಕಂಡ ಯಾವ ಕವಿಯದ್ದಾಗಿದೆ?

(1) ತಿಮ್ಮಣ್ಣ ಕವಿ
(2) ಚಾಮರಸ
(3) ಕುಮಾರವ್ಯಾಸ
(4) ಚಾಟುವಿಠಲನಾಥ

14. ಭಾಮಿನಿ ಷಟ್ಪದಿಯ ಕಾವ್ಯಗಳನ್ನು ಗುರುತಿಸಿ.

(a) ತೊರವೆ ರಾಮಾಯಣ
(b) ಶಿವತತ್ತ್ವ ಚಿಂತಾಮಣಿ
(c) ಹರಿಭಕ್ತಿಸಾರ
(d) ಜೈಮಿನಿ ಭಾರತ

(1) a ಮತ್ತು b ಮಾತ್ರ
(2) c ಮತ್ತು d ಮಾತ್ರ
(3) a ಮತ್ತು c ಮಾತ್ರ
(4) b ಮತ್ತು d ಮಾತ್ರ

15. ಇವುಗಳಲ್ಲಿ ಕೃತಿ ಮತ್ತು ಪಾತ್ರ ಹೊಂದಾಣಿಕೆಯಾಗಿರುವ ಜೋಡಿಗಳನ್ನು ಗುರುತಿಸಿ.

(a) ಪ್ರಭುಲಿಂಗ ಲೀಲೆ - ಗೋರಕ್ಷ
(b) ಭರತೇಶ ವೈಭವ - ಶ್ರೀಪಾಲ
(c) ವೀರೇಶ ಚರಿತೆ - ಆದಯ್ಯ
(d) ಮೋಹನ ತರಂಗಿಣಿ - ಬಾಣಾಸುರ

(1) a ಮತ್ತು d ಮಾತ್ರ
(2) b ಮತ್ತು c ಮಾತ್ರ
(3) c ಮತ್ತು d ಮಾತ್ರ
(4) a ಮತ್ತು b ಮಾತ್ರ

16. ಇವುಗಳಲ್ಲಿ ಕವಿ ಮತ್ತು ಆಶ್ರಯದಾತ ಅರಸ ಹೊಂದಾಣಿಕೆಯಾಗಿರುವ ಜೋಡಿಗಳನ್ನು ಗುರುತಿಸಿ.

(a) ಲಕ್ಕಣ್ಣ ದಂಡೇಶ - ಇಮ್ಮಡಿ ಪ್ರೌಢದೇವರಾಯ
(b) ಮೂರನೆಯ ಮಂಗರಸ - ಸಾಳುವ ನರಸಿಂಹ
(c) ಸಿಂಗರಾರ್ಯ - ಚಿಕ್ಕದೇವರಾಜ ಒಡೆಯರ್
(d) ನಂಜುಂಡ - ವೀರಸೋಮೇಶ್ವರ

(1) a ಮತ್ತು b ಮಾತ್ರ
(2) c ಮತ್ತು d ಮಾತ್ರ
(3) b ಮತ್ತು c ಮಾತ್ರ
(4) a ಮತ್ತು c ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

17. ಇವುಗಳಲ್ಲಿ ಯಾವ ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(a) ಪದಿನೆಂಟು ಬಣ್ಣನೆಯೆಂದು ಬವಣೆಗೊಂಡು ಪದಗೆಟ್ಟು ಬಯಲಬಣ್ಣಿಸದೆ - ಹೆಳವನಕಟ್ಟೆ ಗಿರಿಯಮ್ಮ

(b) ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು ವಿಕಳವಾದರೂ ದೋಷವಿಲ್ಲ - ರತ್ನಾಕರವರ್ಣಿ

(c) ಚೆಂಡಾಟವೆಂಬುದು ತುರುಗಾಹಿ ಮಕ್ಕಳ ತಂಡಕಲ್ಲದೆ ನೃಪಸುತರ ಮಂಡಳಿಗುಚಿತವೆ - ಗೋವಿಂದ ವೈದ್ಯ

(d) ಕೊಟ್ಟು ಕುದಿಯಲು ಬೇಡ, ಕೊಟ್ಟಾಡಿಕೊಳಬೇಡ, ಕೊಟ್ಟು ನಾಕೆಟ್ಟೆನೆನಬೇಡ - ಸರ್ವಜ್ಞ

(1) b ಮತ್ತು d ಮಾತ್ರ

(2) c ಮತ್ತು d ಮಾತ್ರ

(3) a ಮತ್ತು b ಮಾತ್ರ

(4) b ಮತ್ತು c ಮಾತ್ರ

18. ಈ ಕೆಳಗಿನ ಕೃತಿಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ.

(1) ಕುಮಾರ ರಾಮನ ಸಾಂಗತ್ಯ, ತ್ರಿಪುರದಹನ ಸಾಂಗತ್ಯ, ಚಂದ್ರಹಾಸನ ಕತೆ, ಕಂಠೀರವ ನರಸರಾಜ ವಿಜಯ

(2) ಕಂಠೀರವ ನರಸರಾಜ ವಿಜಯ, ತ್ರಿಪುರದಹನ ಸಾಂಗತ್ಯ, ಕುಮಾರ ರಾಮನ ಸಾಂಗತ್ಯ, ಚಂದ್ರಹಾಸನ ಕತೆ

(3) ತ್ರಿಪುರದಹನ ಸಾಂಗತ್ಯ, ಚಂದ್ರಹಾಸನ ಕತೆ, ಕುಮಾರ ರಾಮನ ಸಾಂಗತ್ಯ, ಕಂಠೀರವ ನರಸರಾಜ ವಿಜಯ

(4) ತ್ರಿಪುರದಹನ ಸಾಂಗತ್ಯ, ಕುಮಾರ ರಾಮನ ಸಾಂಗತ್ಯ, ಕಂಠೀರವ ನರಸರಾಜ ವಿಜಯ, ಚಂದ್ರಹಾಸನ ಕತೆ

19. ಹೊಂದಿಸಿ ಬರೆಯಿರಿ :

| ಪಟ್ಟಿ-I | ಪಟ್ಟಿ-II |
|---|---|
| (a) ಅಕ್ಕನಾಗಮ್ಮ | (i) ನಿರ್ಲಜ್ಜೇಶ್ವರ |
| (b) ಮಡಿವಾಳ ಮಾಚಯ್ಯ | (ii) ಬಸವಣ್ಣ ಪ್ರಿಯ ಚೆನ್ನಸಂಗಯ್ಯ |
| (c) ಸೂಳೆ ಸಂಕವ್ವೆ | (iii) ಅಭಿನವ ಮಲ್ಲಿಕಾರ್ಜುನ |
| (d) ನುಲಿಯ ಚಂದಯ್ಯ | (iv) ಕಲಿದೇವರ ದೇವ |
| | (v) ಬಿಂದೇಶ್ವರ ಲಿಂಗ |

ಕೋಡ್‌ಗಳು :

(1) a – v, b – iv, c – iii, d – i

(2) a – iii, b – v, c – i, d – ii

(3) a – i, b – ii, c – iii, d – iv

(4) a – ii, b – iv, c – i, d – v

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

20. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೆ | (i) ಚಾಮರಸನ ಪ್ರಭುಲಿಂಗ ಲೀಲೆ |
| (b) ಎಂಜಲೆಂಜಲು ಎಂಬರಾನುಡಿ ಎಂಜಲಲ್ಲವೆ | (ii) ಲಕ್ಷ್ಮೀಶನ ಜೈಮಿನಿ ಭಾರತ |
| (c) ಕಾರಮುಗಿಲಿನ ಗರ್ಜನೆಯ ಕಿವಿಯಾರೆ ಕೇಳಿದ ಸೋಗೆಯಂತಿರೆ | (iii) ರಾಘವಾಂಕನ ಹರಿಶ್ಚಂದ್ರ ಕಾವ್ಯ |
| (d) ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ | (iv) ಕನಕದಾಸರ ಹರಿಭಕ್ತಿಸಾರ |
| | (v) ನಂಜುಂಡನ ಕುಮಾರರಾಮನ ಸಾಂಗತ್ಯ |

ಕೋಡ್‌ಗಳು :

(1) a – i, b – ii, c – iii, d – iv
(2) a – ii, b – v, c – iv, d – i
(3) a – iii, b – iv, c – i, d – ii
(4) a – iv, b – i, c – ii, d – iii

21. ಹೇಳಿಕೆ : ರುದ್ರವಿಲಾಸದ ಪರಿಯೇ ಬೇರೆ, ಶಿವಕರುಣೆಯೇ ಹಿರಿದು

ವಿವರಣೆ : ಶಿವನ ರೌದ್ರ ಮತ್ತು ಸೌಮ್ಯ ಸ್ವರೂಪದ ರೀತಿ ವಿಭಿನ್ನ. ಆದರೆ ಇವೆರಡರಲ್ಲಿ ಶಿವ ಸ್ವರೂಪದ ಸೌಮ್ಯತೆಯನ್ನೇ ಕವಿ ಇಲ್ಲಿ ಇಚ್ಛಿಸುತ್ತಿದ್ದಾನೆ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ಸರಿ, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ಸರಿ
(4) ಹೇಳಿಕೆ ತಪ್ಪು, ವಿವರಣೆ ತಪ್ಪು

22. 'ಶಬ್ದಮಣಿ ದರ್ಪಣ'ವನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ, ಸಂಪಾದಿಸಿ ಹೊರತಂದ ಮೊದಲ ವಿದ್ವಾಂಸರು :

(1) ಜಾನ್ ಗ್ಯಾರೆಟ್
(2) ಡಿ.ಎಲ್. ನರಸಿಂಹಾಚಾರ್
(3) ಫರ್ಡಿನಾಂಡ್ ಕಿಟೆಲ್
(4) ಬಿ.ಎಲ್.ರೈಸ್

23. ಈ ಕೆಳಗಿನ ಕವನ ಸಂಕಲನಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಬಾಗಿಲು ಬಡಿವ ಜನ | (i) ಎಚ್.ಎಸ್.ಶಿವಪ್ರಕಾಶ |
| (b) ಹೊಳೆಸಾಲಿನ ಮರ | (ii) ಜಿ.ಎಸ್. ಶಿವರುದ್ರಪ್ಪ |
| (c) ಮಳೆ ಬಿದ್ದ ನೆಲದಲ್ಲಿ | (iii) ಎಚ್.ಎಸ್. ವೆಂಕಟೇಶಮೂರ್ತಿ |
| (d) ಗೋಡೆ | (iv) ಲಕ್ಷ್ಮೀ ನಾರಾಯಣ ಭಟ್ಟ |
| | (v) ಗೋಪಾಲಕೃಷ್ಣ ಅಡಿಗ |

ಕೋಡ್‌ಗಳು :

(1) a – iii, b – ii, c – i, d – v
(2) a – iii, b – iv, c – i, d – ii
(3) a – v, b – iii, c – ii, d – iv
(4) a – ii, b – i, c – iv, d – v

ಕಚ್ಚಾ ಕೆಲಸಕ್ಕೆ ಸ್ಥಳ

prepp
Your Personal Exams Guide

24. ಇವುಗಳನ್ನು ಜೋಡಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಕಲ್ಕಿ | (i) ಕುರುಡು ಧರ್ಮಕ್ಕೆ ಸ್ಮಾರಕ |
| (b) ನನ್ನ ಜನಗಳು | (ii) ಹಗಲ ಹೂ ಬಾಡಿತು |
| (c) ಮಹಾತ್ಮ | (iii) ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು |
| (d) ಪುಟ್ಟ ವಿಧವೆ | (iv) ಬಡವರ ಹೊಟ್ಟೆಯ ಬೆಂಕಿಯ ಹಸಿವೆ |

ಕೋಡ್‌ಗಳು :

(1) a – iv, b – ii, c – iii, d – i
(2) a – ii, b – iii, c – iv, d – i
(3) a – iv, b – iii, c – ii, d – i
(4) a – iii, b – iv, c – i, d – ii

25. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಕೆ.ಎಸ್. ನಿಸಾರ್ ಅಹಮದ್ | (i) ಕಾಂಟೆಸ್ಸಾದಲ್ಲಿ ಕಾವ್ಯ |
| (b) ಪು.ತಿ. ನರಸಿಂಹಾಚಾರ್ | (ii) ಕರುಣಾಶ್ರಾವಣಾ |
| (c) ಸಿದ್ದಯ್ಯ ಪುರಾಣಿಕ | (iii) ಹೃದಯ ವಿಹಾರಿ |
| (d) ಬರಗೂರು ರಾಮಚಂದ್ರಪ್ಪ | (iv) ಸಂಜೆ ಐದರ ಮಳೆ |

ಕೋಡ್‌ಗಳು :

(1) a – iv, b – iii, c – ii, d – i
(2) a – iv, b – ii, c – i, d – iii
(3) a – iii, b – ii, c – i, d – iv
(4) a – ii, b – iii, c – i, d – iv

26. ಕೆಳಗಿನವುಗಳಲ್ಲಿ ಯಾವ ಜೋಡಿಗಳು ಸರಿಯಾಗಿ ಹೊಂದಾಣಿಕೆ ಆಗಿವೆ?

(a) ಕೆ.ಎಸ್. ನರಸಿಂಹಸ್ವಾಮಿ - ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ
(b) ಚನ್ನವೀರ ಕಣವಿ - ಜೀವಧ್ವನಿ
(c) ಚಂದ್ರಶೇಖರ ಪಾಟೀಲ - ನೆಲ ಮುಗಿಲು
(d) ಎ.ಕೆ. ರಾಮಾನುಜಂ - ಹೃದಯ ರಂಗ

(1) c ಮತ್ತು d ಮಾತ್ರ
(2) a ಮತ್ತು b ಮಾತ್ರ
(3) b ಮತ್ತು c ಮಾತ್ರ
(4) a ಮತ್ತು c ಮಾತ್ರ

27. ಗೋಪಾಲಕೃಷ್ಣ ಅಡಿಗರಿಂದ ಈ ಕೆಳಗಿನ ಯಾವ ಕಾವ್ಯಗಳು ರಚಿತವಾಗಿಲ್ಲ ?

(a) ಹೇಸರಗತ್ತೆ
(b) ಭಾವ ತರಂಗ
(c) ಹೃದಯಗೀತ
(d) ಚಿಂತಾಮಣಿಯಲ್ಲಿ ಕಂಡ ಮುಖ
(e) ಸುವರ್ಣ ಪುತ್ಥಳಿ

(1) a ಮತ್ತು d
(2) b, c ಮತ್ತು d
(3) a ಮತ್ತು c
(4) b ಮತ್ತು e

ಕಚ್ಚಾ ಕೆಲಸಕ್ಕೆ ಸ್ಥಳ

28. ಹೇಳಿಕೆ-ವಿವರಣೆ ಆಧಾರಿತ ಪ್ರಶ್ನೆ :

ಹೇಳಿಕೆ : ತಂದೆ ನೀ ಕಂದೆರೆದರಂದಿಗರುಣೋದಯವು
ಮುಂದೆ ಸೂರ್ಯೋದಯದ ಚಿಂತೆಯಿಲ್ಲ

ವಿವರಣೆ : ತಂದೆಯಾದ ನೀನು ಕಂಡಾ ಎಂದರೆ ನನಗೆ ಬೆಳಕು
ನಂತರ ಬರುವ ಸೂರ್ಯನ ಬೆಳಕು ಲೆಕ್ಕಕ್ಕಿಲ್ಲ

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ತಪ್ಪು

29. ಹೇಳಿಕೆ-ವಿವರಣೆ ಆಧಾರಿತ ಪ್ರಶ್ನೆ :

ಹೇಳಿಕೆ : ಸಂಸ್ಕೃತವ ತಿಳಿಯದ, ಸ್ವರ್ಗದಲಿ ನೆಲೆಸದ
ಕಪ್ಪು ದೇವತೆಗಳು ಬರಿಗಾಲಿನವರು

ವಿವರಣೆ : ಸಾಂಪ್ರದಾಯಿಕ ಮಾರ್ಗ ದೇವತೆಗಳ ಸ್ವರೂಪಕ್ಕಿಂತ ಭಿನ್ನವಾದ ದೈವತ್ವದ ಪರಿಕಲ್ಪನೆ ಇಲ್ಲಿ ಸಾಂಕೇತಿಕಗೊಂಡಿದೆ.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ಸರಿ, ವಿವರಣೆ ಸರಿ

30. ಈ ಕೆಳಗಿನ ಕೃತಿ ಮತ್ತು ಕೃತಿಯ ವಸ್ತುವನ್ನು ಹೊಂದಿಸಿ ಬರೆಯಿರಿ:

| ಪಟ್ಟಿ-I | ಪಟ್ಟಿ-II |
|---|---|
| (a) ಸ್ವಪ್ನ ಸಾರಸ್ವತ | (i) ಸಂಗೀತಗಾರನ ಕಥಾವಸ್ತುವನ್ನು ಒಳಗೊಂಡ ಕೃತಿ |
| (b) ಬಿರುಕು | (ii) ವಲಸೆಯನ್ನು ವಸ್ತುವಾಗಿ ಉಳ್ಳ ಕಾದಂಬರಿ |
| (c) ಮಲೆಗಳಲ್ಲಿ ಮದುಮಗಳು | (iii) ವಾಸ್ತವದಿಂದ ದೂರ ಓಡುತ್ತಿರುವ ಪಾತ್ರ ಇರುವ ಕೃತಿ |
| (d) ಸುಬ್ಬಣ್ಣ | (iv) ವಸಾಹತುಶಾಹಿಯ ಪ್ರಭಾವವನ್ನು ವರ್ಣಿಸುವ ಕೃತಿ |

ಕೋಡ್‌ಗಳು :

(1) a – i, b – iv, c – iii, d – ii
(2) a – iv, b – ii, c – i, d – iii
(3) a – ii, b – iii, c – iv, d – i
(4) a – iii, b – ii, c – i, d – iv

31. ಪೂರ್ಣಚಂದ್ರ ತೇಜಸ್ವಿ ಅವರ 'ತಬರನ ಕತೆ' ಯ ಸಮಸ್ಯೆ

(1) ಪಿಂಚಣಿ ಸಮಸ್ಯೆ
(2) ಭೂಮಿಯ ಸಮಸ್ಯೆ
(3) ಮದುವೆ ಸಮಸ್ಯೆ
(4) ಕಾಡು ಪ್ರಾಣಿಗಳ ಸಮಸ್ಯೆ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

32. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಗಳಗನಾಥ | (i) ವಿಶ್ವಾಮಿತ್ರನ ಸೃಷ್ಟಿ |
| (b) ಕೆರೂರು ವಾಸುದೇವಾಚಾರ್ಯ | (ii) ಗಂಡಸರು |
| (c) ಆದ್ಯ ರಂಗಾಚಾರ್ಯ | (iii) ಕನ್ನಡಿಗರ ಕರ್ಮಕಥೆ |
| (d) ವೀಣಾ ಶಾಂತೇಶ್ವರ | (iv) ಯದು ಮಹಾರಾಜ |

ಕೋಡ್‌ಗಳು :

(1) a – iii, b – i, c – iv, d – ii
(2) a – iv, b – iii, c – i, d – ii
(3) a – ii, b – i, c – iv, d – iii
(4) a – iii, b – iv, c – i, d – ii

33. ಇವು ನಂಜನಗೂಡು ತಿರುಮಲಾಂಬಾ ಅವರು ಬರೆದ ಕೃತಿಗಳು

(a) ಪದ್ಮ ನಯನ
(b) ವಿಧವಾ ಕರ್ತವ್ಯ
(c) ರಮಾನಂದ
(d) ಪ್ರಿಯಂವದಾ

(1) a, b ಮತ್ತು d
(2) a, c ಮತ್ತು d
(3) b ಮತ್ತು c
(4) b ಮತ್ತು d

34. ಹೊಂದಿಸಿ ಬರೆಯಿರಿ.

| ಪಟ್ಟಿ-I (ಮೂಲಕೃತಿ) | ಪಟ್ಟಿ-II (ಅನುವಾದ) |
|---|---|
| (a) Macbeth (ಮ್ಯಾಕ್‌ಬೆತ್) | (i) ಪ್ರಮೀಳಾರ್ಜುನೀಯಂ |
| (b) A Midsummer Night's Dream (ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್) | (ii) ಶೂರಸೇನ ಚರಿತ್ರೆ |
| (c) Romio and Juliet (ರೋಮಿಯೋ ಅಂಡ್ ಜ್ಯೂಲಿಯಟ್) | (iii) ಪ್ರತಾಪರುದ್ರದೇವ |
| (d) Othello (ಒಥೆಲ್ಲೋ) | (iv) ರಮೇಶ ಲಲಿತಾ |

ಕೋಡ್‌ಗಳು :

(1) a – iii, b – iv, c – i, d – ii
(2) a – ii, b – iii, c – iv, d – i
(3) a – iv, b – i, c – iii, d – ii
(4) a – iii, b – i, c – iv, d – ii

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in
Prepp
Your Personal Exams Guide

35. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಬಿ.ವೆಂಕಟಾಚಾರ್ಯ | (i) ಶಿಕ್ಷಣ ಪದ್ಧತಿ |
| (b) ಆರ್. ನರಸಿಂಹಾಚಾರ್ಯ | (ii) ಸ್ತ್ರೀ ಶಿಕ್ಷಣದ ಅವಶ್ಯಕತೆಯೂ ಅದರ ಶಾಸ್ತ್ರೀಯ ವಿವೇಚನೆಯೂ |
| (c) ವೆಂಕಟ ರಂಗೋಕಟ್ಟಿ | (iii) ವಸ್ತುಪಾಠಗಳು |
| (d) ದೊಡ್ಡ ತಿ. ವೆಂ. | (iv) ಹಿತೋಪದೇಶ |
| | (v) ಪಾಲಿಟಿಕ್ಸ್ ಅಥವಾ ರಾಜನೀತಿ |

ಕೋಡ್‌ಗಳು :

(1) a – v, b – iii, c – i, d – ii
(2) a – iii, b – v, c – iv, d – i
(3) a – ii, b – iv, c – v, d – iii
(4) a – iv, b – iii, c – ii, d – v

36. ನವ್ಯ ತಾತ್ತ್ವಿಕತೆಯ ಲಕ್ಷಣಗಳು ಕಂಡು ಬರುವ ಕಥೆಗಳು :

(a) ಬಯಲು - ಆಲಯ
(b) ನಲ್ಲಿಯಲ್ಲಿ ನೀರು ಬಂತು
(c) ಒಂದು ಮೂಗುತಿಯ ಕಥೆ
(d) ಕ್ಷಿತಿಜ

(1) a ಮತ್ತು b ಮಾತ್ರ
(2) b ಮತ್ತು d ಮಾತ್ರ
(3) b ಮತ್ತು c ಮಾತ್ರ
(4) c ಮತ್ತು d ಮಾತ್ರ

37. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ಸ್ತ್ರೀಪಾತ್ರಗಳು:

(a) ನಾಗವೇಣಿ
(b) ಮಂಜುಳಾ
(c) ಶಾರಿಕೆ
(d) ಕಾತ್ಯಾಯಿನಿ

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) c ಮತ್ತು d ಮಾತ್ರ
(4) a ಮತ್ತು c ಮಾತ್ರ

38. ಈ ಕೆಳಗಿನವುಗಳಲ್ಲಿ ಯಾವ ಕೃತಿಗಳು ಯಾವ ಪ್ರಕಾರದೊಡನೆ ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(a) ಯಮಳ ಪ್ರಶ್ನೆ - ನಾಟಕ
(b) ಆಡಾಡತ ಆಯುಷ್ಯ - ಆತ್ಮಕಥೆ
(c) ಅವಧೇಶ್ವರಿ - ವಿಮರ್ಶೆ
(d) ದಿಲ್ಲೀಶ್ವರನ ದಿನಚರಿ - ಪ್ರಬಂಧ ಸಂಕಲನ

(1) a ಮತ್ತು d ಮಾತ್ರ
(2) b ಮತ್ತು c ಮಾತ್ರ
(3) aಮತ್ತು b ಮಾತ್ರ
(4) b ಮತ್ತು d ಮಾತ್ರ

39. 'ಅಲ್ಪಸ್ವಲ್ಪ ಧ್ವನಿಮಾ ವ್ಯತ್ಯಾಸದೊಡನೆ ನಿರ್ದಿಷ್ಟ ಪರಿಸರದಲ್ಲಿ ಬರುವ ಆಕೃತಿಗಳನ್ನೆಲ್ಲಾ ಅರ್ಥಸಾಮ್ಯದ ಆಧಾರದ ಮೇಲೆ ಒಂದು ಆಕೃತಿಮಾ ಆಗಿ ಗುರುತಿಸಬಹುದು'. ಈ ನಿಯಮಕ್ಕೆ ಉದಾಹರಣೆ:

(1) ನಾನು, ನೀನು, ನನ್ನ
(2) ನಾನ್, ನೀನ್, ನಿನ
(3) ನಾನು, ನನ್ನಿಂದ, ನಿನ
(4) ನಾನ್, ನನ್, ನನ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

40. ತೌಲನಿಕ ಭಾಷಾವಿಜ್ಞಾನದ ಪಿತಾಮಹ:

(1) ಗ್ರೀಮ್
(2) ವಿಲಿಯಂ ಜೋನ್ಸ್
(3) ರಾಸ್‌ಮಸ್ಕ್ ರಾಸ್
(4) ಬಾಪ್

41. ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ.

ಹೇಳಿಕೆ : 'ಮಾಡಿರುತ್ತೇನೆ - ಮಾಡುತ್ತಾನೆ' - ಇವು ಯುಗ್ಮಗಳಾಗಿವೆ.

ವಿವರಣೆ : ಈ ಯುಗ್ಮದಲ್ಲಿನ 'ಏನೆ' ಮತ್ತು 'ಆನೆ' - ಇವು ಕ್ರಮವಾಗಿ ನಿರ್ಧಾರಾತ್ಮಕ ಮತ್ತು ಸಂದೇಹಾತ್ಮಕ ಸ್ವರೂಪದ ಕ್ರಿಯಾ ಪ್ರತ್ಯಯಗಳು

(1) ಹೇಳಿಕೆ ತಪ್ಪು, ವಿವರಣೆ ತಪ್ಪು
(2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ತಪ್ಪು

42. ಕನ್ನಡದ ಸಂವೃತ ಸ್ವರಗಳೆಂದರೆ:

(a) ಉ, ಊ
(b) ಎ, ಏ
(c) ಒ, ಓ
(d) ಅ, ಆ

(1) a ಮತ್ತು c
(2) c ಮತ್ತು b
(3) b ಮತ್ತು a
(4) d ಮತ್ತು c

43. ಇದು ಮಧ್ಯ ದ್ರಾವಿಡ ಭಾಷೆ

(1) ಮುಂಡಾ
(2) ಕುರುಂಬ
(3) ಬ್ರಾಹುಈ
(4) ಮಾಲ್ತೊ

44. ಈ ಕೆಳಗಿನವುಗಳಲ್ಲಿ ಬದ್ಧ ಆಕೃತಿಮಾಗಳು :

(a) – ನು, – ಳು
(b) – ಮನೆ, – ಊರು
(c) – ಇಂದ, – ಗೆ
(d) – ದೆ, – ಕೆಲಸ

(1) c ಮತ್ತು d
(2) b ಮತ್ತು c
(3) d ಮತ್ತು a
(4) a ಮತ್ತು c

45. ಇವು ಆಡುಮಾತಿನ ಲಕ್ಷಣಗಳು:

(1) ಪ್ರಮಾಣಬದ್ಧತೆ
(2) ಪ್ರಾದೇಶಿಕತೆ, ಹೃಸ್ವರೂಪ
(3) ಔಪಚಾರಿಕತೆ
(4) ಬಣ್ಣ, ವಿನ್ಯಾಸ

---

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

46. ಚೋಮ್‌ಸ್ಕಿಯ ಪ್ರಕಾರ ಉತ್ಪಾದನಾ ವ್ಯಾಕರಣದ ಲಕ್ಷಣ :
(1) ಅನೌಪಚಾರಿಕ ನಿಯಮಗಳನ್ನು ವಾಕ್ಯದಲ್ಲಿ ಬಳಸುವುದು
(2) ವಾಕ್ಯಗಳ ಮೇಲೆ ಆಧರಿಸಿದ ಸಾಮಾನ್ಯೀಕರಣ
(3) ವ್ಯಾಕರಣದಲ್ಲಿ ವಾಕ್ಯಗಳ ವರ್ಣನೆ
(4) ಔಪಚಾರಿಕ ನಿಯಮಗಳನ್ನು ಮಿತಿಯಿಲ್ಲದೆ ವಾಕ್ಯದ ಮೇಲೆ ಅನ್ವಯಿಸುವುದು

47. ಈ ಕೆಳಗಿನ ಜೋಡಿಗಳಲ್ಲಿ ಯಾವುದು/ಯಾವುವು ಹೊಂದಾಣಿಕೆ ಆಗುವುದಿಲ್ಲ ?
(a) ಕನ್ನಡದ ಧ್ವನಿಮಾಗಳು - ವ್, ಯ್
(b) ಪಾರ್ಶ್ವಿಕ ಧ್ವನಿಗಳು - ಲ್, ಳ್
(c) ಘೋಷ ಧ್ವನಿಗಳು - ಗ್, ಜ್
(d) ಜಾರು ಧ್ವನಿಗಳು - ಪ್, ಬ್
(1) a ಮಾತ್ರ
(2) d ಮಾತ್ರ
(3) a ಮತ್ತು c ಮಾತ್ರ
(4) d, b ಮತ್ತು a ಮಾತ್ರ

48. ಇವುಗಳಲ್ಲಿ ಯಾವುದು/ಯಾವುವು ಸರಿಯಾಗಿ ಹೊಂದಾಣಿಕೆಯಾಗುತ್ತದೆ/ವೆ?
(a) ನುಡಿ ಬೆರಕೆ : ಒಂದು ಭಾಷೆಯಲ್ಲಿ ಇನ್ನೊಂದು ಭಾಷೆಯ ಪದ ಸೇರಿಸುವುದು.
(b) ನುಡಿ ಪಲ್ಲಟ : ಒಂದು ಭಾಷೆಯಲ್ಲಿ ಇನ್ನೊಂದು ಭಾಷೆಯ ಪದವನ್ನು ಬದಲಾಯಿಸುವುದು.
(c) ಭಾಷಾ ಮಿಶ್ರಣ : ಹಲವು ಭಾಷೆಯ ಪದವನ್ನೂ ವಾಕ್ಯವನ್ನೂ ಸೇರಿಸಿ ಮಾತನಾಡುವುದು.
(d) ಸ್ವೀಕರಣ : ಇನ್ನೊಂದು ಭಾಷೆಯ ಕ್ರಿಯಾಪದವನ್ನು ಸೇರಿಸಿ ಮಾತನಾಡುವುದು.
(1) a, b ಮತ್ತು c ಸರಿ
(2) c ಮಾತ್ರ ಸರಿ
(3) a ಮಾತ್ರ ಸರಿ
(4) a ಮತ್ತು d ಸರಿ

49. ಧೋಂಡೋ ನರಸಿಂಹ ಮುಳಬಾಗಿಲ ಅವರ "ಛಂದಸ್ಸಾರ" ಪ್ರಕಟವಾದ ವರ್ಷ
(1) 1800
(2) 1890
(3) 1941
(4) 1952

50. ಗ್ರಂಥ ಸಂಪಾದನೆಗೆ ತೊಡಗಿದ ಸಂಪಾದಕ ಮೊದಲು ಮಾಡಬೇಕಾದ ಕೆಲಸ
(1) ಸಾಮಗ್ರಿ ಸಂಕಲನ
(2) ಸಾಮಗ್ರಿ ಪರಿಷ್ಕರಣೆ
(3) ಸಾಮಗ್ರಿ ವಿಶ್ಲೇಷಣೆ
(4) ಸಾಮಗ್ರಿ ಪ್ರಕಟಣೆ

51. "ಗ್ರಂಥ ಸಂಪಾದನಾಶಾಸ್ತ್ರ ಪರಿಚಯ" ಕೃತಿಯನ್ನು ಬರೆದವರು
(1) ಬಿ.ಎಸ್. ಸಣ್ಣಯ್ಯ
(2) ಡಿ.ಎಲ್. ನರಸಿಂಹಾಚಾರ್
(3) ಎಂ.ಎಂ. ಕಲಬುರ್ಗಿ
(4) ಸೀತಾರಾಮ ಜಾಗೀರದಾರ

ಕಚ್ಚಾ ಕೆಲಸಕ್ಕೆ ಸ್ಥಳ

52. ಹಸ್ತಪ್ರತಿ ಲೇಖನ ಸಾಮಗ್ರಿಗಳಲ್ಲಿ "ಆಧಾರ" ಸಾಮಗ್ರಿಗಳೆಂದು ಗುರುತಿಸಲ್ಪಡುವವು:

(a) ತಾಳೆಗರಿ ಪ್ರತಿ
(b) ಕಂಟ
(c) ಮಸಿ
(d) ಕಾಗದದ ಪ್ರತಿ

(1) b ಮತ್ತು d ಮಾತ್ರ
(2) a ಮತ್ತು c ಮಾತ್ರ
(3) a ಮತ್ತು b ಮಾತ್ರ
(4) a ಮತ್ತು d ಮಾತ್ರ

53. ಪ್ರಗಾಥದಲ್ಲಿ ರಚಿತವಾದ "ಬೇಲೂರಿನ ಶಿಲಾಬಾಲಿಕೆಯರು" ಮತ್ತು "ಶುಕ್ರಗೀತೆ" ಕವಿತೆಗಳನ್ನು ರಚಿಸಿದವರು ಕ್ರಮವಾಗಿ

(a) ಸು.ರಂ. ಎಕ್ಕುಂಡಿ
(b) ಡಿ.ವಿ.ಜಿ.
(c) ಗೋವಿಂದ ಪೈ
(d) ಬಿ.ಎಂ.ಶ್ರೀ

(1) b ಮತ್ತು d
(2) a ಮತ್ತು c
(3) c ಮತ್ತು d
(4) a ಮತ್ತು d

54. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಗಂಗಾಧರ ಮಡಿವಾಳೇಶ್ವರ ತುರಮರಿ | (i) ಚಮತ್ಕಾರ ಚಂದ್ರಿಕಾ |
| (b) ಮತಂಗಮುನಿ | (ii) ಕನ್ನಡ ಕವಿತಾ ಪದ್ಧತಿಯು |
| (c) ಎಲ್. ಬಸವರಾಜು | (iii) ಕಾವ್ಯಕಲ್ಪಲತಾ |
| (d) ಅಮರಚಂದ್ರಸೂರಿ | (iv) ಬೃಹದ್ದೇಶಿ |
| | (v) ಕನ್ನಡ ಛಂದಸ್ಸಂಪುಟ |

ಕೋಡ್‌ಗಳು :

(1) a – iii, b – v, c – i, d – ii
(2) a – iv, b – v, c – ii, d – i
(3) a – ii, b – iv, c – v, d – iii
(4) a – v, b – iv, c – ii, d – i

55. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಯತಿರ್ವಿಚ್ಛೇದಃ | (i) ಭಟ್ಟಕೇದಾರ |
| (b) ವಿರಾಮೋಯತಿಃ | (ii) ನಾಗವರ್ಮ |
| (c) ಯತಿರ್ವಿಚ್ಛೇದ ಸಂಜ್ಞಿತಾ | (iii) ಜಯದೇವ |
| (d) ಯತಿರ್ಜಿಹ್ವೇಷ್ಟ ವಿಶ್ರಾಮ ಸ್ಥಾನಂ | (iv) ಹೇಮಚಂದ್ರ |
| | (v) ಪಿಂಗಲ |

ಕೋಡ್‌ಗಳು :

(1) a – ii, b – iii, c – iv, d – v
(2) a – iii, b – v, c – ii, d – iv
(3) a – v, b – iv, c – i, d – ii
(4) a – v, b – iii, c – i, d – iv

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

56. ಹೇಳಿಕೆ : ಗ್ರಂಥಸ್ಥ ವಿಷಯದ ಪರಿಜ್ಞಾನಕ್ಕೆ ಸಂಪಾದಕನಿಗೆ ಇತರೆ ಶಾಸ್ತ್ರಗಳ ನೆರವು ಬೇಕಾಗುತ್ತದೆ.

ವಿವರಣೆ : ಸಂಪಾದಕನ ಕಾವ್ಯಶಾಸ್ತ್ರ ಪರಿಜ್ಞಾನದ ಮೇಲೆ ಅವನು ಮಾಡುವ ಪಾಠ ಪರಿಷ್ಕರಣೆ ಕಾರ್ಯ ಅವಲಂಬಿತವಾಗಿರುತ್ತದೆ.

(1) ಹೇಳಿಕೆ ತಪ್ಪು, ವಿವರಣೆ ತಪ್ಪು
(2) ಹೇಳಿಕೆ ಸರಿ, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ಸರಿ

57. ಕಾಲಾನುಕ್ರಮಣಿಕೆಯಲ್ಲಿ ಬರೆಯಿರಿ.

(a) ಬಿ.ಎಲ್. ರೈಸ್
(b) ಫ್ಲೀಟ್
(c) ಕಿಟೆಲ್
(d) ಮೊಗ್ಲಿಂಗ್

(1) d, c, a, b
(2) a, d, b, c
(3) c, a, d, b
(4) b, a, c, d

58. ವಿಮರ್ಶಾ ಪರಿಭಾಷೆಗೆ ಎಲಿಯಟ್ ಕೊಟ್ಟ ಪರಿಕಲ್ಪನೆಗಳು

(a) ವಸ್ತು ಪ್ರತಿರೂಪ
(b) ವ್ಯಕ್ತಿತ್ವ ನಿರಸನ
(c) ಭಾಷೆಯ ಭಾವನಾತ್ಮಕ ಬಳಕೆ
(d) ವೇಸ್ಟ್‌ಲ್ಯಾಂಡ್

(1) b ಮತ್ತು c
(2) a ಮತ್ತು b
(3) b ಮತ್ತು d
(4) a ಮತ್ತು c

59. 'ಪ್ರಜ್ಞಾ ನವನವೋಲ್ಲೇಖಶಾಲಿನೀ ಪ್ರತಿಭಾ ಮತಾ' – ಈ ಮಾತನ್ನು ಹೇಳಿದ ಮೀಮಾಂಸಕ

(1) ಭಟ್ಟತೌತ
(2) ಅಭಿನವಗುಪ್ತ
(3) ಆನಂದವರ್ಧನ
(4) ಭಟ್ಟನಾಯಕ

60. ಕವಿರಾಜಮಾರ್ಗಕಾರ ಉಲ್ಲೇಖಿಸುವ ಗದ್ಯ ಬರಹಗಾರ

(1) ಜಯಬಂಧು
(2) ಶ್ರೀವಿಜಯ
(3) ಪಂಡಿತ
(4) ಲೋಕಪಾಲ

61. 'ಶಾಂತರಸ'ವನ್ನು ಹೊಸದಾಗಿ ಸೇರಿಸಿದ ಮೊದಲ ಮೀಮಾಂಸಕ

(1) ಭಾಮಹ
(2) ಉದ್ಭಟ
(3) ಅಭಿನವಗುಪ್ತ
(4) ಕುಂತಕ

62. 'Culture' ಪದವನ್ನು ಮೊದಲು ಬಳಸಿದ ವಿಮರ್ಶಕ:

(1) ಪಿ.ಬಿ.ಶೆಲ್ಲಿ
(2) ಲಾಂಜಿನಸ್
(3) ಇ.ಬಿ. ಟೈಲರ್
(4) ಕ್ರೋಚೆ

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

63. ಅಲಂಕಾರ ಶಾಸ್ತ್ರಕ್ಕೆ 'ಮಾತೃಕೆ' ಎಂದು ಕೆಲವು ಮೀಮಾಂಸಕರು ಭಾವಿಸಿದ ಕೃತಿ

(1) ಅಗ್ನಿಪುರಾಣ
(2) ವಿಷ್ಣುಪುರಾಣ
(3) ಕಾವ್ಯಾಲಂಕಾರ
(4) ನಾಟ್ಯಶಾಸ್ತ್ರ

64. ರಸಭಂಗಕ್ಕೆ ಮೂಲಕಾರಣ ಯಾವುದು ಎಂದು ಮೀಮಾಂಸಕರು ಹೇಳುತ್ತಾರೆ?

(1) ಪ್ರತಿಭೆ ಇಲ್ಲದಿರುವುದು
(2) ಅನೌಚಿತ್ಯ
(3) ಕಾಲ-ದೇಶ ಭೇದ
(4) ಪದ ದೋಷ

65. "ಧ್ವನಿಯೆನಿಸಿದಳಂಕಾರ...." ಎಂಬ ಮಾತನ್ನು ದಾಖಲಿಸಿದ ಕೃತಿ

(1) ಆದಿಪುರಾಣ
(2) ಕರ್ಪೂರ ಮಂಜರಿ
(3) ಕಾವ್ಯಾಲಂಕಾರ ಸೂತ್ರ
(4) ಧ್ವನ್ಯಾಲೋಕ

66. ಈ ಕೆಳಗಿನ ಉಕ್ತಿಗಳ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

(1) ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು; ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್; ಅಂತರಂಗ-ಬಹಿರಂಗ ಶುದ್ಧಿ; ತಿಳಿಯ ಹೇಳುವೆ ಕೃಷ್ಣಕಥೆಯನು
(2) ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್; ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು; ಅಂತರಂಗ-ಬಹಿರಂಗ ಶುದ್ಧಿ; ತಿಳಿಯ ಹೇಳುವೆ ಕೃಷ್ಣಕಥೆಯನು
(3) ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು; ಅಂತರಂಗ-ಬಹಿರಂಗ ಶುದ್ಧಿ; ತಿಳಿಯ ಹೇಳುವೆ ಕೃಷ್ಣಕಥೆಯನು; ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್
(4) ಅಂತರಂಗ-ಬಹಿರಂಗ ಶುದ್ಧಿ; ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್; ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು; ತಿಳಿಯ ಹೇಳುವೆ ಕೃಷ್ಣಕಥೆಯನು

67. ಈ ಕೆಳಗಿನ ಕೃತಿಗಳ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.

(1) ಪ್ರಾಕ್ಟಿಕಲ್ ಕ್ರಿಟಿಸಿಸಂ; ಲಿರಿಕಲ್ ಬ್ಯಾಲೆಡ್ಸ್; ಕಲ್ಚರ್ ಅಂಡ್ ಅನಾರ್ಕಿ; ಸೆಕ್ರೆಡ್‌ವುಡ್
(2) ಲಿರಿಕಲ್ ಬ್ಯಾಲೆಡ್ಸ್; ಸೆಕ್ರೆಡ್‌ವುಡ್; ಪ್ರಾಕ್ಟಿಕಲ್ ಕ್ರಿಟಿಸಿಸಂ; ಕಲ್ಚರ್ ಅಂಡ್ ಅನಾರ್ಕಿ
(3) ಸೆಕ್ರೆಡ್‌ವುಡ್; ಲಿರಿಕಲ್ ಬ್ಯಾಲೆಡ್ಸ್; ಕಲ್ಚರ್ ಅಂಡ್ ಅನಾರ್ಕಿ; ಪ್ರಾಕ್ಟಿಕಲ್ ಕ್ರಿಟಿಸಿಸಂ
(4) ಲಿರಿಕಲ್ ಬ್ಯಾಲೆಡ್ಸ್; ಕಲ್ಚರ್ ಅಂಡ್ ಅನಾರ್ಕಿ; ಸೆಕ್ರೆಡ್‌ವುಡ್; ಪ್ರಾಕ್ಟಿಕಲ್ ಕ್ರಿಟಿಸಿಸಂ

68. 'ಆಟಿ ಕಳೆಂಜ' ಪ್ರದರ್ಶನ ಕಲೆ ಪ್ರಧಾನವಾಗಿ ಈ ಪ್ರದೇಶದಲ್ಲಿದೆ.

(1) ಮಲೆನಾಡು
(2) ಗಡಿನಾಡು
(3) ತುಳುನಾಡು
(4) ನಡುನಾಡು

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

69. 1874ರ ಇಂಡಿಯನ್ ಆ್ಯಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾದ 'ದಿ ವಿಲೇಜ್ ಫೀಸ್ಟ್' ಲೇಖನದ ಕರ್ತೃ:

(1) ಇ.ಪಿ. ರೈಸ್
(2) ಮೆಕೆಂಜಿ
(3) ಫ್ಲೀಟ್
(4) ಬರ್ನೆಲ್

70. 'ಸಿದ್ದಪ್ಪಾಜಿ ಸಾಲು' ಕಂಡು ಬರುವ ಜನಪದ ಮಹಾಕಾವ್ಯ :

(1) ಮೈಲಾರ ಲಿಂಗನ ಕಾವ್ಯ
(2) ಮಂಟೇಸ್ವಾಮಿ ಕಾವ್ಯ
(3) ಕಾಡುಗೊಲ್ಲರ ಕಾವ್ಯ
(4) ಮಲೆಮಾದೇಶ್ವರ ಕಾವ್ಯ

71. 1967ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಥಮ ಜನಪದ ಸಾಹಿತ್ಯ ಸಮ್ಮೇಳನದಲ್ಲಿ ಹೊರ ಬಂದ ಕೃತಿಯ ಹೆಸರು:

(1) ಜನಪದ ಕಥಾಮೃತ
(2) ಜನಪದ ಸಂಸ್ಕೃತಿ
(3) ಜಾನಪದ ಮೈಲಿಗಲ್ಲುಗಳು
(4) ಹೊನ್ನ ಬಿತ್ತೇವು ಹೊಲಕೆಲ್ಲ

72. ಸ್ಟಿತ್ ಥಾಂಸನ್ ಅವರ ಪ್ರಕಾರ 'ಶಾಬ್ದಿಕ ವರ್ಗೀಕರಣ'ದಡಿಯಲ್ಲಿ ಇವು ಬರುತ್ತವೆ:

(a) ಕಟ್ಟುಕತೆಗಳು
(b) ಹಾಡುಗಳು
(c) ಒಗಟು
(d) ಗಾದೆ

(1) a, b ಮತ್ತು c
(2) a, c ಮತ್ತು d
(3) b, c ಮತ್ತು d
(4) a, b ಮತ್ತು d

73. ಇವು ಜಾನಪದ ಕ್ಷೇತ್ರಕಾರ್ಯದ ಆಧುನಿಕ ವಿಧಾನಗಳಾಗಿವೆ:

(a) ಸಂದರ್ಶನ ವಿಧಾನ/ನಿರೂಪಕನ ವಿಧಾನ
(b) ವರ್ಗೀಕರಣ ವಿಧಾನ
(c) ಅವಲೋಕನ/ಸಹಭಾಗಿತ್ವ ವಿಧಾನ
(d) ಪ್ರಶ್ನಾವಳಿ ವಿಧಾನ

(1) a, b ಮತ್ತು c
(2) a, c ಮತ್ತು d
(3) b, c ಮತ್ತು d
(4) a, b ಮತ್ತು d

74. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಕರ್ನಾಟಕದ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ | (i) ಎನ್.ಆರ್. ನಾಯಕ |
| (b) ಕರ್ನಾಟಕದ ಜನಪದ ಕಥೆಗಳು | (ii) ಬಿ.ಎ. ವಿವೇಕ ರೈ |
| (c) ಜನಪದ ಒಗಟುಗಳು | (iii) ಕೆ.ಆರ್. ಸಂಧ್ಯಾರೆಡ್ಡಿ |
| (d) ಕಾರವಾರ ಜಿಲ್ಲೆಯ ಜನಪದ ಗೀತೆಗಳು | (iv) ನಂ. ತಪಸ್ವೀಕುಮಾರ |
| | (v) ಎಸ್.ಜಿ. ಇಮ್ರಾಪುರ |

ಕೋಡ್‌ಗಳು :

(1) a – iii, b – v, c – i, d – ii
(2) a – iv, b – iii, c – v, d – i
(3) a – v, b – iv, c – i, d – iii
(4) a – ii, b – v, c – iv, d – i

ಕಚ್ಚಾ ಕೆಲಸಕ್ಕೆ ಸ್ಥಳ

75. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
| --- | --- |
| (a) ಸೋಬಾನೆ ಚಿಕ್ಕಮ್ಮನ ಪದಗಳು | (i) ಪಿ.ಕೆ.ರಾಜಶೇಖರ |
| (b) ಭೂಮಿ ಮತ್ತು ಹಿಂಸೆ | (ii) ಕಾಳೇಗೌಡ ನಾಗವಾರ |
| (c) ಮಲೆಯ ಮಾದೇಶ್ವರ | (iii) ಎಚ್.ಎಲ್.ನಾಗೇಗೌಡ |
| (d) ಬಯಲು ಸೀಮೆಯ ಲಾವಣಿಗಳು | (iv) ವಾಮನ ನಂದಾವರ |
| | (v) ಹಿ.ಶಿ. ರಾಮಚಂದ್ರೇಗೌಡ |

ಕೋಡ್‌ಗಳು :

(1) a – v, b – iv, c – ii, d – iii
(2) a – ii, b – i, c – iv, d – v
(3) a – iii, b – v, c – i, d – ii
(4) a – iv, b – iii, c – ii, d – v

76. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
| --- | --- |
| (a) ಗಾದೆಗಳು | (i) ಜೀ.ಶಂ. ಪರಮಶಿವಯ್ಯ |
| (b) ಯಕ್ಷಗಾನ ಬಯಲಾಟ | (ii) ಮತಿಘಟ್ಟ ಕೃಷ್ಣಮೂರ್ತಿ |
| (c) ನಮ್ಮ ಹಳ್ಳಿಯ ಹಾಡುಗಳು | (iii) ಎ.ಕೆ. ರಾಮಾನುಜನ್ |
| (d) ಜನಪದ ಖಂಡಕಾವ್ಯಗಳು | (iv) ಎಲ್.ಆರ್. ಹೆಗಡೆ |
| | (v) ಶಿವರಾಮ ಕಾರಂತ |

ಕೋಡ್‌ಗಳು :

(1) a – ii, b – iv, c – i, d – iii
(2) a – v, b – iii, c – iv, d – i
(3) a – iii, b – v, c – ii, d – i
(4) a – i, b – ii, c – v, d – iii

77. 'ಓರಿಯಂಟಲ್ ಲೈಬ್ರರಿ'ಯನ್ನು 'ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯ' ಎಂದು ಮರು ನಾಮಕರಣ ಮಾಡಿದ ವರ್ಷ?

(1) 1923
(2) 1881
(3) 1939
(4) 1834

78. "ಎ ರಾಯಲ್ ಗ್ರ್ಯಾಂಟ್ ಆಫ್ ಲ್ಯಾಂಡ್ ಇನ್ ಕರ್ನಾಟಕ" ಲೇಖನದಲ್ಲಿ ಚರ್ಚಿಯಾದ ಶಾಸನ ಯಾವ ಅರಸು ಮನೆತನಕ್ಕೆ ಸಂಬಂಧಿಸಿದೆ?

(1) ಬಾದಾಮಿ ಚಾಲುಕ್ಯರು
(2) ರಾಷ್ಟ್ರಕೂಟರು
(3) ವಿಜಯನಗರದ ಅರಸರು
(4) ಆದಿಲ್‌ಶಾಹಿಗಳು

79. "ಓರಿಯಂಟಲಿಸಂ" ಕೃತಿಯನ್ನು ರಚಿಸಿದವರು.

(1) ಗೂಗಿ ವಾ ಥಿಯಾಂಗೋ
(2) ಫುಕೋ
(3) ಡೆರಿಡಾ
(4) ಎಡ್ವರ್ಡ್ ಸೈದ್

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

80. ಆಶೀಶ್ ನಂದಿಯವರ ವಸಾಹತೋತ್ತರ ಚಿಂತನೆಯ ಕೃತಿ ಯಾವುದು?

(1) ಎ ಪ್ಯಾಸೇಜ್ ಟು ಇಂಡಿಯಾ
(2) ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್
(3) ಇಂಟಿಮೇಟ್ ಎನಿಮಿ
(4) ಥಿಂಗ್ಸ್ ಫಾಲ್ ಅಪಾರ್ಟ್

81. ಶಾಸನಗಳನ್ನು ಅವಲಂಬಿಸಿ "ಕರ್ನಾಟಕದ ಅರಸು ಮನೆತನಗಳು" ಎಂಬ ಕೃತಿಯನ್ನು ರಚಿಸಿದವರು ಯಾರು?

(a) ರಂಗನಾಥ ದಿವಾಕರ
(b) ಆರ್.ಎಸ್. ಪಂಚಮುಖಿ
(c) ಲಕ್ಷ್ಮಿ ನಾರಾಯಣ ರಾವ್
(d) ಸೂರ್ಯನಾಥ ಕಾಮತ್

(1) a ಮತ್ತು d
(2) a ಮತ್ತು c
(3) b ಮತ್ತು c
(4) b ಮತ್ತು d

82. ಕೀರ್ತಿನಾಥ ಕುರ್ತಕೋಟಿ ಅವರ ಕೃತಿಗಳನ್ನು ಗುರುತಿಸಿ.

(a) ವಿಚಾರಮಂಜರಿ
(b) ಸಂಸ್ಕೃತಿ ಸ್ಪಂದನ
(c) ಉರಿಯ ನಾಲಗೆ
(d) ಭುವನದ ಭಾಗ್ಯ

(1) a ಮತ್ತು c ಮಾತ್ರ
(2) b ಮತ್ತು d ಮಾತ್ರ
(3) a, b, c ಮತ್ತು d
(4) b ಮತ್ತು c ಮಾತ್ರ

83. ಹೊಂದಿಸಿ ಬರೆಯಿರಿ:

| ಪಟ್ಟಿ-I | ಪಟ್ಟಿ-II |
|---|---|
| (a) ಡಿ.ಎಲ್.ನರಸಿಂಹಾಚಾರ್ | (i) ಭಾಷಾ ವಿಜ್ಞಾನ (ತತ್ವ, ಇತಿಹಾಸ, ಅನುಷ್ಠಾನ) |
| (b) ರಾಜ ಪುರೋಹಿತ | (ii) ಇನ್ಸ್‌ಕ್ರಿಪ್ಷನ್ಸ್ ಇನ್ ನಾರ್ದರ್ನ್ ಕರ್ನಾಟಕ ಆ್ಯಂಡ್ ಕೊಲ್ಲಾಪುರ |
| (c) ಕೆ.ಜಿ. ಕುಂದಣಗಾರ | (iii) ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ |
| (d) ಎಂ. ಮರಿಯಪ್ಪಭಟ್ಟ | (iv) ಶಬ್ದವಿಹಾರ |
| | (v) ವಿಜಯನಗರ ಸಾಮ್ರಾಜ್ಯ |

ಕೋಡ್‌ಗಳು :

(1) a – v, b – iii, c – i, d – ii
(2) a – iii, b – v, c – iv, d – i
(3) a – iv, b – i, c – ii, d – iii
(4) a – ii, b – iv, c – v, d – i

84. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಗೊ.ರು. ಚನ್ನಬಸಪ್ಪ | (i) ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು |
| (b) ತೀ.ನಂ. ಶಂಕರನಾರಾಯಣ | (ii) ಜನಪದ ಬೆಡಗಿನ ವಚನಗಳು |
| (c) ಸುಧಾಕರ | (iii) ಮಲೆನಾಡಿನ ಜಾನಪದ |
| (d) ಚನ್ನಣ್ಣ ವಾಲೀಕಾರ | (iv) ಕರ್ನಾಟಕ ಜನಪದ ಕಲೆಗಳು |
| | (v) ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು |

ಕೋಡ್‌ಗಳು :

(1) a – iv, b – i, c – ii, d – v
(2) a – ii, b – iii, c – v, d – i
(3) a – v, b – iv, c – i, d – iii
(4) a – iii, b – ii, c – iv, d – v

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

85. ಶಂಬಾ ಜೋಶಿಯವರ ಕೃತಿಗಳ ಪ್ರಕಟಣೆಯ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ.

(1) ಮಹಾರಾಷ್ಟ್ರದ ಮೂಲ, ಕಣ್ಮರೆಯಾದ ಕನ್ನಡ, ಕಂನುಡಿಯ ಹುಟ್ಟು, ಕಂನುಡಿಯ ಜೀವಾಳ

(2) ಕಂನುಡಿಯ ಜೀವಾಳ, ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ, ಕಂನುಡಿಯ ಹುಟ್ಟು

(3) ಕಂನುಡಿಯ ಹುಟ್ಟು, ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ, ಕಂನುಡಿಯ ಜೀವಾಳ

(4) ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ, ಕಂನುಡಿಯ ಹುಟ್ಟು, ಕಂನುಡಿಯ ಜೀವಾಳ

86. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಮಾಸ್ತಿ ವೆಂಕಟೇಶ ಅಯ್ಯಂಗಾರ್ | (i) ವಾಗ್ಭೂಷಣ |
| (b) ಹರ್ಮನ್ ಮೊಗ್ಲಿಂಗ್ | (ii) ಲೋಕಶಿಕ್ಷಣ |
| (c) ವೆಂಕಟ ರಂಗೋ ಕಟ್ಟಿ | (iii) ಮಂಗಳೂರು ಸಮಾಚಾರ |
| (d) ಆಲೂರು ವೆಂಕಟರಾಯರು | (iv) ಜೀವನ |
| | (v) ಸಾಧನೆ |

ಕೋಡ್‌ಗಳು :

(1) a – iii, b – v, c – i, d – ii

(2) a – ii, b – i, c – v, d – iii

(3) a – iv, b – iii, c – ii, d – i

(4) a – iii, b – iv, c – i, d – ii

87. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಚಂದ್ರಕಾಂತ ಪೋಕಳೆ | (i) ಸೆಕೆಂಡ್ ಸೆಕ್ಸ್ |
| (b) ದೇ. ಜವರೇಗೌಡ | (ii) ಕನ್ನಡ ಕಾಳಿದಾಸ ಮಹಾಸಂಪುಟ |
| (c) ಎಚ್.ಎಸ್. ಶ್ರೀಮತಿ | (iii) ಅಕ್ರಮ ಸಂತಾನ |
| (d) ಎಸ್.ವಿ. ಪರಮೇಶ್ವರ ಭಟ್ಟ | (iv) ಹಳದಿ ಮೀನು |
| | (v) ಹಮ್ಮುಬಿಮ್ಮು |

ಕೋಡ್‌ಗಳು :

(1) a – ii, b – i, c – v, d – iii

(2) a – iv, b – i, c – ii, d – v

(3) a – v, b – iv, c – i, d – iii

(4) a – iii, b – v, c – i, d – ii

88. ಫರ್ಡಿನಾಂಡ್ ಕಿಟೆಲ್ ಪ್ರಕಟಿಸಿದ ಕೃತಿಗಳನ್ನು ಕಾಲಾನುಕ್ರಮದಲ್ಲಿ ಗುರುತಿಸಿ.

(1) ಕನ್ನಡ - ಇಂಗ್ಲೀಷ್ ಶಬ್ದಕೋಶ, ಛಂದೋಂಬುಧಿ, ಪಂಚತಂತ್ರ, ಶಬ್ದಮಣಿದರ್ಪಣ

(2) ಪಂಚತಂತ್ರ, ಕನ್ನಡ - ಇಂಗ್ಲೀಷ್ ಶಬ್ದಕೋಶ, ಛಂದೋಂಬುಧಿ, ಶಬ್ದಮಣಿದರ್ಪಣ

(3) ಶಬ್ದಮಣಿದರ್ಪಣ, ಪಂಚತಂತ್ರ, ಕನ್ನಡ - ಇಂಗ್ಲೀಷ್ ಶಬ್ದಕೋಶ, ಛಂದೋಂಬುಧಿ

(4) ಪಂಚತಂತ್ರ, ಶಬ್ದಮಣಿದರ್ಪಣ, ಛಂದೋಂಬುಧಿ, ಕನ್ನಡ - ಇಂಗ್ಲೀಷ್ ಶಬ್ದಕೋಶ

---

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

**89.** ಇವು ಪೋಸ್ಟ್‌ಗೇಟ್ ಹೆಸರಿಸಿರುವ ಭಾಷಾಂತರದ ತತ್ವಗಳು.

(a) ವಿಧೇಯತಾ ತತ್ವ
(b) ಆನಂದ ತತ್ವ
(c) ಅನುರೂಪತಾ ತತ್ವ
(d) ಪರಿಹಾರ ತತ್ವ

(1) a ಮತ್ತು b
(2) a, b ಮತ್ತು c
(3) b, c ಮತ್ತು d
(4) a, b, c ಮತ್ತು d

**90.** ಬಿ. ವೆಂಕಟಾಚಾರ್ಯರು ಅನುವಾದಿಸಿದ ಬಂಕಿಮಚಂದ್ರರ ಕಾದಂಬರಿಗಳು:

(a) ದುರ್ಗೇಶ ನಂದಿನಿ
(b) ಆನಂದ ಮಠ
(c) ದೇವಿ ಚೌಧುರಾಣಿ
(d) ಪರಿಮಳಾ

(1) a ಮತ್ತು c
(2) a ಮತ್ತು b
(3) a, b ಮತ್ತು c
(4) a, b ಮತ್ತು d

**91.** ಇವು ತೌಲನಿಕ ಸಾಹಿತ್ಯದ ಮುಖ್ಯ ಪ್ರಕಾರಗಳು :

(a) ವಸ್ತು ಸಮಾನತೆಯನ್ನಾಧರಿಸಿದ ಅಧ್ಯಯನ
(b) ಪ್ರಭೇದ ಅಧ್ಯಯನ
(c) ಪ್ರಭಾವ ಅಧ್ಯಯನ
(d) ವಿವರಣಾತ್ಮಕ ಅಧ್ಯಯನ

(1) a, b ಮತ್ತು c
(2) a, c ಮತ್ತು d
(3) b, c ಮತ್ತು d
(4) a, b ಮತ್ತು d

**92.** ಕನ್ನಡದ 'ಸಂಗ್ರಹಾನುವಾದ'ವು ಇಂಗ್ಲೀಷಿನ ಈ ಪ್ರಕಾರಗಳನ್ನು ಸೂಚಿಸುತ್ತದೆ.

(a) ಅಬ್ರಿಜ್ಡ್‌ಮೆಂಟ್ (Abridgement)
(b) ಕಂಡೆನ್ಸೇಷನ್ (Condensation)
(c) ಪ್ರಿಸೀಸ್ (Precis)
(d) ಎಪಿಟೋಮಿ (Epitomy)

(1) a ಮತ್ತು c
(2) a, c ಮತ್ತು d
(3) a ಮತ್ತು b
(4) a, b, c ಮತ್ತು d

**93.** "ಭಾಷಾಂತರ ಪ್ರಜ್ಞಾಪೂರ್ವ ಕಲೆ" – ಈ ಹೇಳಿಕೆಯನ್ನು ನೀಡಿದವರು:

(1) ಸಿ.ಪಿ. ಕೃಷ್ಣಕುಮಾರ್
(2) ಪ್ರಧಾನ ಗುರುದತ್ತ
(3) ಎಸ್.ವಿ. ರಘುನಾಥರಾಯರು
(4) ಬಾನು ಮುಷ್ತಾಕ್

**94.** ಇಂಗ್ಲೀಷಿನ Paraphrase (ಪ್ಯಾರಾಫ್ರೇಸ್) ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಹೀಗೆ ಹೇಳಲಾಗುತ್ತದೆ:

(1) ಭಾವಾನುವಾದ
(2) ಶಬ್ದಾನುವಾದ
(3) ವಿಸ್ತಾರಾನುವಾದ
(4) ರೂಪಾಂತರ

**95.** 'ಜಾಗತಿಕ ಸಾಹಿತ್ಯ' ಎಂಬ ಪರಿಭಾಷೆಯನ್ನು ಮೊದಲಿಗೆ ಬಳಸಿದವನು :

(1) ಆಲ್‌ಡ್ರಿಡ್ಜ್
(2) ರೇನೆ ಎತಿಂಬಲ್
(3) ಹೆನ್ರಿ ಗಿಫರ್ಡ್
(4) ಗಯಟೆ

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

★ ಗದ್ಯ ಭಾಗ ಆಧಾರಿತ ಪ್ರಶ್ನೆಗಳು :

ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ. ಈ ಕೆಳಗಿನ ಭಾಗವನ್ನು ಓದಿ ಅದನ್ನು ಆಧರಿಸಿದ ಐದು ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ (96-100).

ಈ ತೆಱದೆ ಕಾಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಕಾಲದೊಳೊಂದು ದೆವಸಂ ಬೈಗುಂಬೊೞ್ತು ನೊಳೆಂದಿನಂತಿರೋಲಗಂ ಪರಿಯೆ, ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೆಯ್ತುರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಟ್ಟು ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕಯ್ವಿಡಿದೊಳಚೌಕಿಗುಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುತಿರ್ದಳ್. ಈ ಉಪಚಾರದಿನಾತನ ಪಸಿವುಂ ಬಟಲ್ಕೆಯುಂ ಮುಗಿಯೆ ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿಸೀವುತಮಿರೆ, ಇಂತು ಸುಖ ಸಲ್ಲಾಪಂಗೊಳುತಿರ್ದರ್ ಅದೆಂತನೆ:

ಮನೋರಮೆ : (ಮೆಲ್ನುಡಿಯಿಂ) ನೋೞ್ಪುದೀ ಪಗಲ್ಗಳೆಂತೊ ಪಿರಿಯವು!
ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ
ಬೇಸರ್ತುದು. ಅಂತದಱಿನೇನಾನುಮೊಂದು ನಲ್ಗತೆಯಂ ಪೇೞಿ!

ಮುದ್ದಣ : ಪ್ರಾಣೇಶ್ವರೀ ತಡೆಯೇಂ! ಇನಿತೊಂದು ಬಯಕೆ ತಲೆದೋಱೆ ಆವ ಗಹನಂ? ಆದೊಡಮಾವ ನಲ್ಗತೆಯಂ ಪೇೞ್ವೆಂ? ಏಂ ಭೋಜ ಪ್ರಬಂಧಂ? ವಿಕ್ರಮ ವಿಜಯಂ, ಮಹಾವೀರ ಚರಿತಂ?

ಮನೋರಮೆ : ಇಸ್ಸಿ! ಇವರೊಳೆನಗಟ್ಕಱಿಲ್ಲಂ; ಉಟಿದೊಡಮಟಿದೊಡಂ ಬಟ್ಟೆದೋಱಿಪ ರಸಭರಿತಂ ಚರಿತಮೈಸೆ

ಮುದ್ದಣ : ನಿನಗಾವ ರಸದೊಳಿಷ್ಟಂ? ಶೃಂಗಾರ ರಸದೊಳೆ? ವೀರರಸದೊಳೆ? ಹಾಸ್ಯರಸದೊಳೆ?

ಮನೋರಮೆ : ಆವ ರಸದೊಳೆಂದೊಡೇಂ? ನವರಸದೊಳಂ

ಮುದ್ದಣ : ಅಂತಿರೆ ಮತ್ತಮಾ ಕತೆ ಯಾವುದು?

ಮನೋರಮೆ : ರಾಮಾಯಣದೊಳೇನಾನುಮೊಂದು

ಮುದ್ದಣ : ಅಂತೆಯೆ ಅಕ್ಕೆ; ಸೀತಾ ಸ್ವಯಂವರಮಂ ಪೇೞ್ವೆಂ

ಮನೋರಮೆ : ಆಂ ಮುನ್ನಮೆ ಕೇಳ್ದಿರ್ಪೆನಲ್ತೆ !

ಮುದ್ದಣ : ಏಂ, ಸೀತಾಪಹರಣಕಥನದೊಳ್ ಬಯಕೆಯೇ?

ಮನೋರಮೆ : ಉಃ! ಆನೊಲ್ಲೆಂ

ಮುದ್ದಣ : ಮೇಣಾವ ನಲ್ಗತೆಯಂ ಪೇೞ್ವೆನೋ

ಮನೋರಮೆ : ಇಂತೇಕುಸಿರ್ವಯ್? ನಾಡೊಳೆನಿತ್ತೊ ರಾಮಾಯಣಂಗಳೊಳವು. ನೀಂ ಕೇಳ್ದುದಱೊಳೊಂದಂ ನಲ್ಮೆದೋಱಿ ಕಂಡು ಪೇೞ್ವುದು

ಮುದ್ದಣ : ನೀನೆ ಒಂದನಾಯ್ದುಕೊಳ್ವುದು

ಮನೋರಮೆ : ಶ್ರೀರಾಮಂ ಅಶ್ವಮೇಧಮಂ ಕಯ್ಕೊಂಡನೆಂಬರಲ್ತೆ ; ಆ ಕತೆಯೆ ಅಕ್ಕುಂ.

ಮುದ್ದಣ : ಈಗಳಱಿತೆಂ ; ಶೇಷರಾಮಾಯಣಮಂ ಪೇೞ್ವುದೆಂಬೆಯೆ?

ಮನೋರಮೆ : ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದನೊರೆದರ್?

ಮುದ್ದಣ : ಮುನ್ನಂ ಶೇಷಂ ವಾತ್ಸಾಯನಂಗೆ ಪೇೞ್ದನದನೆಯೆ ನಿನಗೆ ಬಿತ್ತರಿಪೆಂ, ಆದೊಡೆ ಬಲ್ಗತೆ ಕಣಾ! ಒಂದೆರಡ್ದೆವಸಕ್ಕೆ ಮುಡಿಯದು.

ಮನೋರಮೆ : ಇರ್ಕೆ, ಓರೊಂದು ದೆವಸಮಿನಿಸಿನಿಸಂ ಪೇೞ್ದೊಡೇಂ?

ಮುದ್ದಣ : ಅಕ್ಕುಂ, ಆವ ಧಾಟಿಯೊಳ್ ಪೇೞ್ವೆಂ; ಪದ್ಯದೊಳ್ ಪೇೞ್ವೆನೋ? ಗದ್ಯದೊಳ್ ಪೇೞ್ವೆನೋ?

---

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

ಮನೋರಮೆ : ಪದ್ಯಂ ವಧ್ಯಂ ; ಗದ್ಯಂ ಹೃದ್ಯಮದಱಿಂ ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು.

ಮುದ್ದಣ : (ನಸುನಗೆಯಿಂ) ಅದಂತಿರ್ಕೆ. ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚನೀವರ್. ನೀನೀವುದೇಂ?

ಮನೋರಮೆ : ಪೇೞತೇಂ? ಎನ್ನನೆ ಆನೀವೆಂ.

96. 'ಸಂಪ್ರಾಪ್ತವಾದ ವರ್ಷಕಾಲದೊಳೊಂದು ದೆವಸಂ ಬೈಗುಂಬೊೞ್ತಿನೊಳೆಂದಿನಂತಿರೆ' – ಈ ವಾಕ್ಯದ ಅರ್ಥ:

(1) ಬರುತ್ತಿರುವ ಮಳೆಗಾಲದ ಒಂದು ದಿನ ಸಂಜೆಯ ಸಮಯ, ಯಥಾ ಪ್ರಕಾರ ಇರಲು

(2) ಸದಾಕಾಲ ಬರುತ್ತಿರುವ ಮಳೆಗಾಲದಲ್ಲಿ ಸಂಜೆಯ ಸಮಯವನ್ನು ಎಂದಿನಂತೆ ಕಳೆಯುತ್ತಿರಲು

(3) ಪ್ರಾಪ್ತವಾದ ಒಂದು ದಿವಸ ಬರುತ್ತಿರುವ ಮಳೆಯಲ್ಲಿ ಬೆಳಗಿನ ಜಾವ ಎಂದಿನ ಹಾಗೆ ಇರಲು

(4) ಮಳೆಗಾಲದ ಒಂದು ದಿನ ಸಂಜೆಯ ಸಮಯವು ಪ್ರಾಪ್ತಿಯಾಗುತ್ತಿರುವಾಗ

97. ಮುದ್ದಣನನ್ನು ನೋಡಿ ಮನೋರಮೆ ಏನು ಮಾಡಿದಳು ಎಂದು ವರ್ಣಿಸಲಾಗಿದೆ?

(1) ಕಾಲಿಗೆ ನೀರು ಹಾಕಿ, ಒರೆಸಿಕೊಳ್ಳಲು ಚೌಕವನ್ನು ಕೊಟ್ಟು ಮಣೆಯಲ್ಲಿ ಕುಳ್ಳಿರಿಸಿದಳು.

(2) ಎದುರುಗೊಂಡು ಕಾಲು ತೊಳೆಯಲು ನೀರು ಕೊಟ್ಟು ಕೈ ಹಿಡಿದು ಒಳಮನೆಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿದಳು.

(3) ದೂರದಿಂದಲೇ ಅವನನ್ನು ಎದುರುಗೊಂಡು ತೊಳೆದುಕೊಳ್ಳಲು ನೀರುಕೊಟ್ಟು ಕೈಹಿಡಿದು ಒಳಗೆ ಕರೆದೊಯ್ದಳು.

(4) ಮಳೆಯಲ್ಲಿ ತೊಯ್ಯಿಸಿಕೊಂಡು ಬಂದ ಮುದ್ದಣನಿಗೆ ಒರೆಸಿಕೊಳ್ಳಲು ಬಟ್ಟೆಯನ್ನು ಕೊಟ್ಟು ಮಣೆಯ ಮೇಲೆ ಕೂರಿಸಿದಳು.

98. ಮನೋರಮೆಯು ಎಂಥ ಕಥೆಯನ್ನು ಕೇಳಲು ಬಯಸಿದಳು?

(I) ಜೀವನಕ್ಕೆ ದಾರಿ ತೋರುವ ಕಥೆ

(II) ವೈರಾಗ್ಯವನ್ನು ಬೋಧಿಸುವ ಚರಿತ

(III) ರಸಾನ್ವಿತವಾದ ಕಥೆ

(IV) ಒಳ್ಳೆಯದಾದ ಯಾವುದಾದರೂ ಕಥೆ

(1) I ಮತ್ತು II

(2) I ಮತ್ತು III

(3) II ಮತ್ತು IV

(4) II ಮತ್ತು III

99. ಮುದ್ದಣನು ಮನೋರಮೆಗೆ ಹೇಳಿದ ಕಥೆಯು :

(1) ಶೇಷರಾಮಾಯಣದ ಭಾಗ

(2) ರಾಮಾಯಣದ ಸೀತಾಪಹರಣದ ಕಥೆ

(3) ರಾಮಾಯಣದ ಸೀತಾ ಸ್ವಯಂವರದ ಕಥೆ

(4) ವಾತ್ಸಾಯನ ಶೇಷನಿಗೆ ಹೇಳಿದ ರಾಮಾಶ್ವಮೇಧ ಕಥೆ

100. ಮನೋರಮೆಯು ಕಥೆಯನ್ನು ಕೇಳಬಯಸಿದ ರೀತಿ ಏನನ್ನು ಸೂಚಿಸುತ್ತದೆ?

(I) ಕನ್ನಡದ ಆಧುನಿಕತೆಯು ಗದ್ಯ ನಿರೂಪಣೆಗೆ ಒಲಿಯುತ್ತಿದ್ದ ಕಾಲವನ್ನು ಸೂಚಿಸುತ್ತಿದೆ.

(II) ಸಂಪೂರ್ಣ ಕಾವ್ಯದಲ್ಲಿ ಕಥೆಯನ್ನು ಹೇಳುವುದು ಹಳೆಯ ಕಾಲದ್ದು , ಎನ್ನುವುದು.

(III) ಮನೋರಮೆಗೆ ಪದ್ಯಕ್ಕಿಂತ ಗದ್ಯ ಹೆಚ್ಚು ಇಷ್ಟ ಇರಬಹುದು ಎನ್ನುವುದು.

(IV) ಗದ್ಯದಲ್ಲಿ ಹೇಳಿದರೆ ಹೆಚ್ಚು ಅರ್ಥವಾಗುತ್ತದೆ ಮತ್ತು ಮುದ್ದಣನ ಬೇಡಿಕೆಯು ಈಡೇರುತ್ತದೆ.

(1) II ಮತ್ತು IV

(2) I ಮತ್ತು II

(3) II ಮತ್ತು III

(4) III ಮತ್ತು IV

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Your Personal Exams Guide

ಕಚ್ಚಾ ಕೆಲಸಕ್ಕೆ ಸ್ಥಳ